ದಿಃ 02.08.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

---

ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ದಿ. 10.04.2012 ರಂದು ಆರೋಪಿ ಸೂರ್ಯಗಾಯತ್ರಿ ಮತ್ತು ಆಕೆಯ ಗಂಡ ಶ್ರೀಪತಿ ಎಂಬುವವರು ವಿಟ್ಲದಲ್ಲಿರುವ ನನ್ನ ಕಚೇರಿಗೆ ಬಂದು 15,00,000/- ಹಣಕ್ಕಾಗಿ ನನ್ನಲ್ಲಿ ಬೇಡಿಕೆ ಇಟ್ಟರು. ಆಗ ಅವರಿಬ್ಬರನ್ನು ನನ್ನ ಸ್ನೇಹಿತರಾದ ಸಂತೋಷ್ ಕುಮಾರ್ (ಚಾಸಾ-2) ರವರ ಬಳಿಗೆ

ಕಳುಹಿಸಿಕೊಟ್ಟಿರುತ್ತೇನೆ. ಮಾತುಕತೆ ಮಾಡಿಕೊಂಡು ಮೂವರು ನನ್ನ ಕಚೇರಿಗೆ ವಾಪಾಸ್ಸಾಗಿ ಬಂದ ನಂತರ ನಾವು ನಾಲ್ಕು ಮಂದಿ ಮಾತುಕತೆ ನಡೆಸಿರುತ್ತೇವೆ. ಸದರಿ ಮಾತುಕತೆಯಲ್ಲಿ ರೂ.15,00,000/- ಹಣವನ್ನು ಕೊಡುವಂತೆ ಸಂತೋಷ ರವರಿಗೆ ಹೇಳಿರುತ್ತೇನೆ.

2. ದಿ. 22.06.2012 ರಂದು ನೂರು ರೂಪಾಯಿ ಮುಖ ಬೆಲೆಯ ಛಾಪಾ ಕಾಗದದಲ್ಲಿ ಆನ್ ಡಿಮ್ಯಾಂಡ್ ಪ್ರೋಮಿಸರಿ ನೋಟ್ ಅನ್ನು ಸೂರ್ಯಗಾಯತ್ರಿ ರವರು ಸಂತೋಷ ರವರ ಹೆಸರಿಗೆ ಬರೆದುಕೊಟ್ಟು ಡಿಸೆಂಬರ್ ಮೊದಲ ವಾರದಲ್ಲಿ ಹಿಂತಿರುಗಿಸಲು ಒಪ್ಪಿ ಶೇಕಡಾ 16% ಬಡ್ಡಿಗೆ ರೂ.15,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಗೆ ನಾನು ಸಾಕ್ಷಿದಾರರಾಗಿ ಸಹಿ ಹಾಕಿರುತ್ತೇನೆ. ಸದರಿ ರೂ.15,00,000/- ಹಣವನ್ನು ಸೂರ್ಯಗಾಯತ್ರಿ ರವರಿಗೆ ಸಂತೋಷ ರವರ ಮೂಲಕ ಕೊಡಿಸಿರುತ್ತೇನೆ.

3. ದಿ. 01.02.2013 ರಂದು ಸೂರ್ಯಗಾಯತ್ರಿ ರವರು ನನ್ನಲ್ಲಿ ಬಂದು ನೀವು ಸಂತೋಷ ರವರ ಮುಖಾಂತರ ಕೊಡಿಸಿದ ಸಾಲದ ಹಣವನ್ನು ಮರುಪಾವತಿಸಲು ಸಾಧ್ಯವಾಗುತ್ತಿಲ್ಲ, ನಿವೇ ರೂ.15,00,000/- ಹಣವನ್ನು ಕೋಡಬೇಕೆಂದು ಕೇಳಿಕೊಂಡಿರುತ್ತಾರೆ. ಈ ವಿಚಾರವಾಗಿ ಸುಜಾತಾ ರವರು ಸ್ವಿಜರ್ಲ್ಯಾಂಡ್ ದಿಂದ ಫೋನ್ ಕರೆ ಮಾಡಿ ತನ್ನ ತಂಗಿಯನ್ನು ನಿಮ್ಮ ಬಳಿ ಕಳುಹಿಸಿಕೊಡುತ್ತಿದ್ದೇನೆ ಹಣವನ್ನು ನೀಡುವಂತೆ ಕೇಳಿಕೊಂಡಿರುತ್ತಾರೆ. ರೂ.1,500/- ಬೆಲೆಯ ಇ-ಸ್ಟಾಂಪ್ ಮತ್ತು ರೂ.200/-ಮುಖ ಬೆಲೆಯ ಛಾಪಾ ಕಾಗದ ಮೇಲೆ ಎರಡು ಆನ್ ಡಿಮ್ಯಾಂಡ್ ಪ್ರೋನೋಟ್ ಅನ್ನು ಬರೆದುಕೊಟ್ಟು ಶೇಕಡಾ 15% ಬಡ್ಡಿಗೆ ದಿ. 30.03.2013 ರೊಳಗೆ

ಮರುಪಾವತಿಸುವುದಾಗಿ ಒಪ್ಪಿ ರೂ.15,00,000/- ಹಣವನ್ನು ಸೂರ್ಯಗಾಯತ್ರಿ ರವರು ನನ್ನಿಂದ ಪಡೆದುಕೊಂಡಿರುತ್ತಾರೆ. ಸದರಿ ನನ್ನಿಂದ ಪಡೆದುಕೊಂಡ ರೂ.15,00,000/- ಹಣವನ್ನು ನನ್ನ ಕಚೇರಿಯಲ್ಲಿ ಅದೇ ದಿನ ಸಂತೋಷ ರವರಿಗೆ ಸೂರ್ಯಗಾಯತ್ರಿ ಪಾವತಿಸಿರುತ್ತಾರೆ.

4. ದಿ. 02.04.2013 ರಂದು ಸೂರ್ಯಗಾಯತ್ರಿ ರವರು ನನಗೆ ಕರೆ ಮಾಡಿ ನಿಮಗೆ ಹಣವನ್ನು ಹಿಂತಿರುಗಿಸಲು ಆಗುವುದಿಲ್ಲ ನಿಮ್ಮ ಮನೆಯನ್ನು ಮಾರಾಟ ಮಾಡಿ ಸಾಲ ತೀರಿಸಿಕೊಳ್ಳಿ ಎಂದು ಹೇಳಿದ್ದಲ್ಲದೆ ನನಗೆ ಬೆದರಿಕೆ ಹಾಕಿರುತ್ತಾರೆ. ದಿ**. 04.04.2013** ರಂದು ಹಣವನ್ನು ಮರುಪಾವತಿಸುವಂತೆ ಸೂರ್ಯಗಾಯತ್ರಿ ರವರಿಗೆ ವಕೀಲರ ಮುಖಾಂತರ ನೋಟಿಸು ಕಳುಹಿಸಿರುತ್ತೇನೆ**.** ದಿ**. 29.05.2013** ರಂದು ಕಾಣತ್ತೂರು ದೈವಸ್ಥಾನದಿಂದಲೂ ಸಹ ಹಣ ಮರುಪಾವತಿಸುವಂತೆ ಲಿಖಿತ ನೋಟಿಸನ್ನು ನೀಡಿಸಿರುತ್ತೇನೆ. ದಿ. 10.04.2013 ರಂದು ಪುನಃ ಸೂರ್ಯಗಾಯತ್ರಿ ಮತ್ತು ಸುಜಾತಾ ಇಬ್ಬರು ಫೋನ್ ಮಾಡಿ ನನಗೆ ಬೇವರ್ಸಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನನ್ನಿಂದ ಹಣವನ್ನು ಪಡೆದುಕೊಂಡು ಸುಳ್ಳು ದಾಖಲೆಯನ್ನು ಸೃಷ್ಟಿಸಿ ನನಗೆ ಮೋಸ ವಂಚನೆ ಮಾಡಿರುತ್ತಾರೆ.

5. ದಿ. 04.07.2013 ರಂದು ಸೂರ್ಯಗಾಯತ್ರಿ ಹಾಗೂ ಕೆಲವು ಗೂಂಡಾಗಳು ಒಟ್ಟಿಗೆ ನನ್ನ ಕಚೇರಿಗೆ ಬಂದು ಬೇವರ್ಸಿ, ರಂಡೆ ಮಗನೆ ಎಂದು ಅವಾಚ್ಯ ಶಬ್ಧಗಳಿಂದ ಬೈದು, ಹಣ ಬೇಕಾದರೆ ಕೋರ್ಟನಲ್ಲಿ ವಸೂಲಿ ಮಾಡು, ಹಣಕ್ಕೆ ಬೇಡಿಕೆ ಇಟ್ಟರೆ ನಿನ್ನನ್ನು ಕೊಲ್ಲುವುದಾಗಿ ಬೆದರಿಕೆ

ಹಾಕಿರುತ್ತಾರೆ. ದಿ. ಅನ್ಯ ಮಾರ್ಗವಿಲ್ಲದೆ ದಿ. 05.07.2013 ರಂದು ಖಾಸಗಿ ಪಿರ್ಯಾದನ್ನು ನ್ಯಾಯಾಲಯದ ಮುಂದೆ ಸಲ್ಲಿಸಿರುತ್ತೇನೆ.

6. ದಿ**. 01.02.2013** ರಂದು ನನ್ನಿಂದ ರೂ**.15,00,000/-** ಸಾಲವನ್ನು ಪಡೆಯುವಾಗ ಹಂಜ ಎಂಬುವರಿಂದ ಸುಜಾತ ರವರು ಖರೀದಿಸಿದ ಸ್ವತ್ತಿನ ಕ್ರಯ ಪತ್ರದ ಮೂಲ ಪ್ರತಿಯನ್ನು ಸೂರ್ಯಗಾಯತ್ರಿ ಯವರು ನನಗೆ ನೀಡಿರುತ್ತಾರೆ. ಸೂರ್ಯಗಾಯತ್ರಿ ಮತ್ತು ಸುಜಾತ ರವರ ವಿರುದ್ಧ ಹಣ ಮರುಪಾವತಿಸುವಂತೆ ಕೇರಳದ ನ್ಯಾಯಾಲಯದಲ್ಲಿ ನಾನು ಸಿವಿಲ್ ದಾವೆಯನ್ನು ಸಹ ಸಲ್ಲಿಸಿರುತ್ತೇನೆ. ಸದರಿ ಮೇಲೆ ಹೇಳಿದ ದಾಖಲೆ ಈಗಲೂ ನನ್ನ ಬಳಿ ಇದೆ.

7. ಸೂರ್ಯಗಾಯತ್ರಿ ರವರಿಗೆ ವಕೀಲರ ಮುಖಾಂತರ ನೀಡಿಸಿದ ಕಚೇರಿಯ ನೋಟಿಸ ಪ್ರತಿಯನ್ನು ನಿಪಿ**-2** ಎಂದು ಗುರುತಿಸಲಾಯಿತು. ತಕ್ಷಿರು ಸ್ಥಳದ ಮಹಜರನ್ನು ನಿಪಿ**-3** ಎಂದು **,** ಸಾಕ್ಷಿಯ ಸಹಿಯನ್ನು ನಿಪಿ**-3(**ಎ**)** ಎಂದು ಗುರುತಿಸಲಾಯಿತು.

8. ದಿ. 28.10.2013 ರಂದು ವಿಟ್ಲ ಪೋಲಿಸರು ನನ್ನನ್ನು ಕರೆದಿರುತ್ತಾರೆ. ನನ್ನನ್ನು ವಿಚಾರಿಸಿ, ರೂ.15,00,000/- ಹಣವನ್ನು ಪಡೆದ ಬಗ್ಗೆ ರಶೀದಿ, ಸೂರ್ಯಗಾಯತ್ರಿ ಮತ್ತು ನನ್ನೊಳಗೆ ಆದ ದಿ. 01.02.2013 ರ ರೂ.200/- ಚಾಪಾ ಕಾಗದದ ಪ್ರೋಮಿಸರಿ ನೋಟ್, ರೂ.1,500/- ಮುಖ ಬೆಲೆಯ ಇ-ಸ್ಟಾಂಪ್ ಮೇಲೆ ಬರೆದುಕೊಟ್ಟ ಕರಾರು ಪತ್ರವನ್ನು ಪೋಲಿಸ್ ಅಧಿಕಾರಿ ಮಾದವ ಕುಡ್ವ ರವರು ನಾನು ಹಾಜರುಪಡಿಸಿದ ಮೇರೆಗೆ ವಶಕ್ಕೆ

ಪಡೆದುಕೊಂಡು ಮದ್ಯಾಹ್ನ 12.00 ಗಂಟೆಯಿಂದ 1.00 ಗಂಟೆವರೆಗೆ ದಾಖಲೆಯನ್ನು ಬರವಣಿಗೆ ಮಾಡಿರುತ್ತಾರೆ. ಮಹಮ್ಮದ್ ಮತ್ತು ಪ್ರಕಾಶ್ ಎಂಬುವವರು ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆ.

9. ಪೋಲಿಸರಗೆ ನಾನು ಹಾಜರುಪಡಿಸಿದ ದಾಖಲೆಗಳೆಂದರೆ ದಿ. **01.02.2013** ರ ಅಗ್ರಿಮೆಂಟ್ ಅನ್ನು ಆರೋಪಿ ಪರ ವಕೀಲರ ತಕರಾರಿಗೊಳಪಟ್ಟು ನಿಪಿ**-4** ಎಂದು**,** ಸಾಕ್ಷಿಯ ಸಹಿಗಳನ್ನು ನಿಪಿ**-4(ಎ),(ಬಿ),(ಸಿ),(ಡಿ)** ಎಂದು ಗುರುತಿಸಲಾಯಿತು. ದಿ**.01.02.2013**ರ ಆನ್ ಡಿಮ್ಯಾಂಡ್ ಪ್ರೋಮಿಸರಿ ನೋಟ್ ಮತ್ತು ಹಣ ಸಂದ ರಶೀದಿಯನ್ನು ಆರೋಪಿ ಪರ ವಕೀಲರ ತಕರಾರಿಗೊಳಪಟ್ಟು ನಿಪಿ**-5** ಎಂದು ಗುರುತಿಸಲಾಯಿತು**.** ದಿ**.28.10.2013**ರಂದು ಪೋಲಿಸರು ನನ್ನಿಂದ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ**.** ನ್ಯಾಯಾಲಯದ ಮುಂದಿರುವ 1ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿದರು. 2ನೇ ಆರೋಪಿ ಕಲ 205 ರ ಡಿಯಲ್ಲಿ ಹಾಜರಾತಿಗಾಗಿ ಉನ್ಮುಕ್ತಿ ಪಡೆದಿರುತ್ತಾರೆ. ಸಾಕ್ಷಿಯಿಂದ ಸದರಿ ಆರೋಪಿಯನ್ನು ಗುರುತಿಸಲು ತಕರಾರು ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಎಪಿಪಿಯವರಿಂದಃ -

10. ಪೋಲಿಸರು ಮದ್ಯಾಹ್ನ 2.00 ಗಂಟೆಯಿಂದ 3.00 ಗಂಟೆ ವರೆಗೆ ಸ್ಥಳ ಮಹಜರ ತಯಾರಿಸಿರುತ್ತಾರೆ. ಎಂದರೆ ಸರಿ. ಸದರಿ ಮಹಜರಿಗೆ ಕೆ.ಪಿ ಹಮೀದ್ ರವರು ಸಹಿ ಹಾಕಿರುತ್ತಾರೆ. ಎಂದರೆ ಸರಿ.

**(** ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿರುತ್ತಾರೆ ನೀಡಲಾಯಿತು **)**

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ